ಅಧ್ಯಕ್ಷರು :- ಅವರು ಆಶ್ವಾಸನೆ ಕೊಟ್ಟರೂ ಕೂಡ ನೀವು ಮಾತನಾಡುತ್ತಿದ್ದರೆ ಹೇಗೆ? ಉಳಿಕೆ ತಾಲ್ಲೂಕುಗಳನ್ನು ಸೇರಿಸುತ್ತೇವೆ ಎಂದು ಅವರು ಹೇಳಿದ್ದಾರೆ. ಈ ವಿಷಯ ಇಲ್ಲಿಗೆ ಮುಗಿಯಿತು. ಮಾನ್ಯ ಯೋಗಿಶ್ ಭಟ್‌ರವರೇ, ಈಗ ನೀವು ಪ್ರಸ್ತಾಪ ಮಾಡಿ.

(ಊ) ವಿಷಯ: ಮಂಗಳೂರು ನಗರದಲ್ಲಿ ವ್ಯಾಪಕವಾಗಿ ಹೆಚ್ಚುತ್ತಿರುವ ಮಲೇರಿಯಾ ಮತ್ತು ಫೈಲೇರಿಯಾ ರೋಗಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳು

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :- ಸನ್ಮಾನ್ಯ ಅಧ್ಯಕ್ಷರೇ, ಮಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಮಲೇರಿಯಾ ರೋಗ ವ್ಯಾಪಕವಾಗಿ ಹಬ್ಬುತ್ತಿದೆ. ಬೈನ್‌ಗೆ ಎಫೆಕ್ಟ್ ಆಗುವ ಫಾಲ್ಸಿಫಾರಂ ಎನ್ನುವ ಖಾಯಿಲೆ ಮತ್ತು ವೈವೆಕ್ಟ್ ಎನ್ನುವ ಮತ್ತೊಂದು ಖಾಯಿಲೆ ಅಲ್ಲಿ ವ್ಯಾಪಕವಾಗಿ ಪಸರಿಸುತ್ತಿವೆ. ಅಷ್ಟು ಮಾತ್ರವಲ್ಲ, ಅದರಿಂದ ಸಾಕಷ್ಟು ಸಾವುನೋವುಗಳ ವರದಿಗಳೂ ಸಹ ನಮ್ಮ ಗಮನಕ್ಕೆ ಬರುತ್ತಿವೆ. ಫೈಲೇರಿಯಾ ಎನ್ನುವ ಖಾಯಿಲೆ ಮಂಗಳೂರಿನಲ್ಲಿ ನಿಂತುಹೋಗಿತ್ತು ಎನ್ನುವ ಮಾಹಿತಿ ಇದೆ. ಆದರೆ ಆಘಾತಕರ ಅಂಶವೆಂದರೆ, ಕಳೆದ ಎರಡು ವರ್ಷಗಳಿಂದ ಈ ಫೈಲೇರಿಯಾ ಖಾಯಿಲೆ ಕೂಡ ಹಬ್ಬುತ್ತಿದೆ. ಇದಕ್ಕೆ ಮುಖ್ಯ ಕಾರಣವೆಂದರೆ, ಒಳಚರಂಡಿ ಯೋಜನೆಯ ದುಸ್ಥಿತಿಯಿಂದ ಇದು ಆಗುತ್ತಿದೆ. ಅಲ್ಲದೆ, ಫೈಲೇರಿಯಾ ಮತ್ತು ಮಲೇರಿಯಾ ನಿಯಂತ್ರಣ ಘಟಕ ಕೂಡ ಕೆಲಸ ಮಾಡುತ್ತಿಲ್ಲ. ಕಳೆದ ನಾಲ್ಕು ವರ್ಷಗಳಿಂದ ಒಂದು ನಯಾಪೈಸೆಯ ಅನುದಾನವೂ ಸಹ ಈ ಘಟಕಕ್ಕೆ ರಾಜ್ಯಸರ್ಕಾರದಿಂದ ಬಿಡುಗಡೆಯಾಗಿಲ್ಲ. ಈ ಘಟಕವು ಹೆಸರಿಗೆ ಮಾತ್ರ ಇದೆಯೇ ಹೊರತು, ಇದರಿಂದ ಯಾವುದೇ ಕೆಲಸವಾಗುತ್ತಿಲ್ಲ. ಇದರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ, ಅದಕ್ಕೆ ಬರಬೇಕಾದ ಗ್ರಾಂಟನ್ನು ಬಿಡುಗಡೆ ಮಾಡಬೇಕು. ಗ್ರಾಂಟ್ ಬರಬೇಕಾಗಿರುವುದು ರಾಜ್ಯದಿಂದಲೇ ಅಥವಾ ಕೇಂದ್ರದಿಂದಾಗಲೀ, ತಕ್ಷಣ ಅದನ್ನು ಬಿಡುಗಡೆ ಮಾಡುವಂಥ ವ್ಯವಸ್ಥೆಯನ್ನು ತಾವು ಮಾಡಬೇಕಾಗಿದೆ. ಬೆಂಗಳೂರು ಮಹಾನಗರ ಪಾಲಿಕೆಯಷ್ಟೆ ವಿಸ್ತಾರವಿರುವ ಮಂಗಳೂರು ಮಹಾನಗರ ಪಾಲಿಕೆಗೆ 1980ರಿಂದ ಯಾವುದೇ ಸಿಬ್ಬಂದಿಯನ್ನು ನೇಮಕ ಮಾಡದೇ ಇರುವುದರಿಂದ, ಸ್ವೀ ಮಾಡಲೂ ಸಿಬ್ಬಂದಿಯಿಲ್ಲ, ಶುಚಿತ್ವದ ಕೆಲಸವನ್ನು ಮಾಡಲೂ ಸಿಬ್ಬಂದಿ ಇಲ್ಲ. ಇವತ್ತು ಎಲ್ಲಾ ರೀತಿಯ ದುಸ್ಥಿತಿಯನ್ನು ಅಲ್ಲಿಯ ಜನತೆ ಅನುಭವಿಸುತ್ತಿದ್ದಾರೆ. ಈ ರೋಗಗಳು ವ್ಯಾಪಕವಾಗಿ ಹರಡುವ ಮುಂಚೆ ಅಂದರೆ ತಕ್ಷಣವೇ ಕ್ರಮವನ್ನು ತೆಗೆದುಕೊಂಡು ಸಿಬ್ಬಂದಿಯನ್ನು ನೇಮಕ ಮಾಡಬೇಕು ಮತ್ತು ಮಲೇರಿಯಾ ನಿಯಂತ್ರಣ ಘಟಕ ಹಾಗೂ ಫೈಲೇರಿಯಾ ನಿಯಂತ್ರಣ ಘಟಕಗಳಿಗೆ ತಕ್ಷಣ ಚಾಲನೆ ಕೊಟ್ಟು, ಅವುಗಳಿಗೆ ಬಾಕಿ ಇರುವಂಥ ಗ್ರಾಂಟನ್ನು ತಕ್ಷಣವೇ ಬಿಡುಗಡೆ ಮಾಡಬೇಕು. ಅವಶ್ಯಕವಾಗಿ ಬೇಕಾದ ಔಷಧಿಗಳನ್ನು ಕೂಡ ಎಲ್ಲ ಕಡೆಗೆ ಕೊಡಬೇಕು ಮತ್ತು ಲ್ಯಾಬೋರೇಟರಿ ಟೆಸ್ಟ್‌ಗೆ ಬೇಕಾದ ಉಪಕರಣಗಳನ್ನು ಮತ್ತು ರಾಸಾಯನಿಕಗಳನ್ನು ಸಹ ತಕ್ಷಣವೇ ವಿತರಣೆ ಮಾಡಬೇಕು ಎಂದು ನಾನು ತಮ್ಮ ಮೂಲಕ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ಸಚಿವರು) :- ಮಾನ್ಯ ಅಧ್ಯಕ್ಷರೆ, ಮಾನ್ಯ ಯೋಗೀಶ್ ಭಟ್‌ರವರು ಪ್ರಸ್ತಾಪ ಮಾಡಿದ ವಿಚಾರದಲ್ಲಿ ನಾವು ಈ ರೀತಿಯ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಮಂಗಳೂರು ನಗರದಲ್ಲಿ ಇದುವರೆಗೆ ವರದಿಯಾಗಿರುವ ಮಲೇರಿಯಾ ಮತ್ತು ಅನೇಕಾಲು ರೋಗ ಪ್ರಕರಣಗಳು ಹಾಗೂ ಸಂಭವಿಸಿರುವ ಸಾವುಗಳು ಹೀಗಿವೆ.

ವರ್ಷ	ದಕ್ಷಿಣ ಕನ್ನಡ				ಮಂಗಳೂರು ನಗರ			
	ಮಲೇರಿಯ ಪ್ರಕರಣಗಳು	ಮರಣ ಪ್ರಕರಣಗಳು	ಆನೇಕಾಲು ರೋಗ ಪ್ರಕರಣಗಳು	ಮರಣ ಪ್ರಕರಣಗಳು	ಮಲೇರಿಯಾ ಪರಕರಣಗಳು	ಮರಣ ಪ್ರಕರಣಗಳು	ಆನೇಕಾಲು ರೋಗ ಪ್ರಕರಣಗಳು	ಮರಣ ಪ್ರಕರಣಗಳು
2000	2653	0	42	0	1637	0	33	0
2001	4441	0	32	0	2965	0	25	0
2002 (ಮೇ ವರೆಗೆ)	1105	0	14	0	709	0	12	0

ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಮಲೇರಿಯ ರೋಗದಿಂದ ಹಾಗೂ ಆನೇಕಾಲು ರೋಗದಿಂದ ಮರಣ ಸಂಭವಿಸಿರುವ ವರದಿಯಾಗಿರುವುದಿಲ್ಲ.

ಜೂನ್ ತಿಂಗಳಲ್ಲಿ, ಜಿಲ್ಲೆಯಲ್ಲಿ ಒಟ್ಟು 481 ಮಲೇರಿಯಾ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದ್ದು, ಇದರಲ್ಲಿ 343 ಪ್ರಕರಣಗಳು ಮಂಗಳೂರು ನಗರಕ್ಕೆ ಸೇರಿರುತ್ತದೆ.

ದಕ್ಷಿಣ ಕನ್ನಡ ಮತ್ತು ಮಂಗಳೂರು ನಗರದಲ್ಲಿ ಮಲೇರಿಯ ಮತ್ತು ಆನೇಕಾಲು ರೋಗ ನಿಯಂತ್ರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1) ಜ್ವರ ಪ್ರಕರಣಗಳ ಸಮೀಕ್ಷೆ, ರಕ್ತಲೇಪನ ಸಂಗ್ರಹಣೆ, ಪರೀಕ್ಷೆ ಹಾಗೂ ತೀವ್ರ ಚಿಕಿತ್ಸೆ ನೀಡಲಾಗುತ್ತಿದೆ.
2) ಜಿಲ್ಲೆಯಲ್ಲಿ ಒಟ್ಟು 119 ಔಷಧಿ ವಿತರಣಾ ಕೇಂದ್ರಗಳನ್ನು, 89 ಜ್ವರ ಚಿಕಿತ್ಸಾ ಕೇಂದ್ರಗಳು ಮತ್ತು 72 ಮಲೇರಿಯಾ ಚಿಕಿತ್ಸಾಲಯಗಳನ್ನು ಸ್ಥಾಪಿಸಿದ್ದು ಇವುಗಳಲ್ಲಿ ಇದುವರೆಗೆ ಒಟ್ಟು 9383 ಜ್ವರಪ್ರಕರಣಗಳಿಗೆ ಚಿಕಿತ್ಸೆ ನೀಡಲಾಗಿದೆ.
3) ಕೀಟನಾಶಕ ಸಿಂಪರಣಾ ಕಾರ್ಯವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ನಿಯಮಿತವಾಗಿ ಕೈಗೊಳ್ಳಲಾಗುತ್ತಿದೆ. ಇದಕ್ಕಾಗಿ ಜಿಲ್ಲೆಗೆ ಒಟ್ಟು 13,120 ಕೆ.ಜಿ. ಡಿಡಿಟಿ ಸರಬರಾಜು ಮಾಡಿದ್ದು, ಇದರಲ್ಲಿ ಮೊದಲ ಸುತ್ತಿಗೆ 2108 ಕೆ.ಜಿ., 6 ಪ್ರಾಥಮಿಕ ಆರೋಗ್ಯ ಕೇಂದ್ರಗಳ 12 ಗ್ರಾಮಗಳಲ್ಲಿ ಸಿಂಪಡಿಸಲಾಗಿದೆ. ಎರಡನೇ ಸುತ್ತಿನ ಸಿಂಪರಣೆಗಾಗಿ ಒಟ್ಟು ರೂ. 40,500ಯ- ಗಳನ್ನು ಮಜೂರಿಗಾಗಿ ಬಿಡುಗಡೆ ಮಾಡಲಾಗಿದ್ದು ಸಿಂಪರಣಾ ಕಾರ್ಯ ಕೈಗೊಳ್ಳಲಾಗಿದೆ.
4) ಮಂಗಳೂರಿನಲ್ಲಿರುವ ಆನೇಕಾಲು ರೋಗ ಚಿಕಿತ್ಸಾಲಯದಿಂದ ರಾತ್ರಿವೇಳೆ ರಕ್ತಲೇಪನ ಸಂಗ್ರಹಣಾ ಕಾರ್ಯವು ನಡೆಯುತ್ತಿದ್ದು, ಮೈಕ್ರೋಫೈಲೇರಿಯಾ ಪ್ರಕರಣಗಳಿಗೆ ಮತ್ತು ರೋಗ ಕಾಣಿಸಿಕೊಂಡಿರುವ ಪ್ರಕರಣಗಳಿಗೆ ಡಿ.ಇ.ಸಿ. ಮಾತ್ರೆಗಳಿಂದ ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ.
5) ನಗರ ಪ್ರದೇಶಗಳಲ್ಲಿ ರೋಗವಾಹಕ ನಿಯಂತ್ರಣಕ್ಕಾಗಿ ಕೀಟನಾಶಕ ದ್ರಾವಣವನ್ನು ಸೊಳ್ಳೆ ಉತ್ಪತ್ತಿತಾಣಗಳಲ್ಲಿ ಸಿಂಪಡಿಸಲಾಗುತ್ತಿದೆ (Abate Baylaro)
6) ಜೈವಿಕ ಪರಿಸರ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಸೊಳ್ಳೆ ಉತ್ಪತ್ತಿ ತಾಣಗಳಲ್ಲಿ ಗಪ್ಪಿ ಮತ್ತು ಗ್ಯಾಂಬೂಸಿಯ ಲಾರ್ವಾಹಾರಿ ಮೀನುಗಳನ್ನು ಬಿಡಲಾಗಿದೆ.

ಆಗಿನ ನಗರ ಮುನಿಸಿಪಲ್ ಕೌನ್ಸಿಲ್ ಮಾಡಿದ ರೆಸಲ್ಯೂಷನ್ ಪ್ರಕಾರ ಸರ್ಕಾರದ ಆದೇಶ ಸಂಖ್ಯೆ HFW 280 HSM 81, ದಿನಾಂಕ 29-4-1983 ರಂತೆ, ಆನೇಕಾಲು ರೋಗ ಘಟಕಕ್ಕೆ ಸರ್ಕಾರವು ಅನುದಾನವನ್ನು 1-4-1975 ರಿಂದ ಪೂರ್ವಾನ್ವಯವಾಗುವಂತೆ ನಿಲ್ಲಿಸಲಾಗಿದ್ದು, ಈ ಘಟಕವನ್ನು ಶಾಶ್ವತ ಘಟಕವನ್ನಾಗಿ ಪರಿವರ್ತಿಸಿ, ದಿನಾಂಕ 1-4-1979 ರಿಂದ ಮಂಗಳೂರು ಮಹಾನಗರ ಪಾಲಿಕೆಯೇ ಇದರ ವೆಚ್ಚವನ್ನು ಭರಿಸುತ್ತಿದೆ. ಆದರೆ, ಮಲೇರಿಯ ಮತ್ತು ಆನೇಕಾಲು ರೋಗ ನಿಯಂತ್ರಣಕ್ಕಾಗಿ, ಕೀಟನಾಶಕ ದ್ರಾವಣಗಳು, ಮಲೇರಿಯ ನಿರೋಧಕ ಗುಳಿಗೆಗಳನ್ನು, ಮೈಕ್ರೋಫೈಲೇರಿಯ ಗುಣಪಡಿಸಲು ಬೇಕಾದ ಡಿ.ಇ.ಸಿ. ಮಾತ್ರೆಗಳು, ಪ್ಯಾರಸಿಟಮಾಲ್ ಗುಳಿಗೆಗಳು, ಮುಂತಾದುವನ್ನು ಭಾರತ ಸರ್ಕಾರವು ಅನುದಾನದ ರೂಪದಲ್ಲಿ ನೀಡುತ್ತಲಿದೆ. 2000-01 ಮತ್ತು 2001-02ರಲ್ಲಿ (ಇಲ್ಲಿಯವರೆಗೆ) ಜಿಲ್ಲೆಗೆ ಈ ಕೆಳಕಂಡ ಸಾಮಗ್ರಿಗಳನ್ನು ಅನುದಾನದ ರೂಪದಲ್ಲಿ ಸರಬರಾಜು ಮಾಡಲಾಗಿದೆ.

ವರ್ಷ	2000-01	2001-02
ಕ್ಲೋರೋಕ್ವಿನ್ ಗುಳಿಗೆಗಳು	8 ಲಕ್ಷಗಳು	6 ಲಕ್ಷಗಳು
ಪ್ರೈಮಾಕ್ವಿನ್ ಗುಳಿಗೆಗಳು	33,000	25,000
ಡಿಇಸಿ ಮಾತ್ರೆಗಳು	50,000	50,000
ಪ್ಯಾರಾಸಿಟಮಾಲ್ ಗುಳಿಗೆಗಳು	24,000	20,000
ಟೆಮೆಫಾಸ್ ಕೀಟನಾಶಕ ದ್ರಾವಣ	150 ಲೀಟರ್	-
ಬೇಟೆಕ್ಸ್ ಕೀಟನಾಶಕ ದ್ರಾವಣ	300 ಲೀಟರ್	250 ಲೀಟರ್
ಪೈರಿಥ್ರಮ್ ಕೀಟನಾಶಕ್	200 ಲೀಟರ್	-

ಈ ಘಟಕಕ್ಕೆ ಹೆಚ್ಚುವರಿ ಸಿಬ್ಬಂದಿಯ ನೇಮಕಾತಿಯನ್ನು ಪಾಲಿಕೆಯೇ ಮಾಡಬೇಕಾಗಿರುತ್ತದೆ. ನೇಮಕಗೊಳ್ಳಬೇಕಾದ ಹೆಚ್ಚಿನ ಸಿಬ್ಬಂದಿಯ ಬಗ್ಗೆ ಮಾಹಿತಿ ನೀಡಿ ಆದಷ್ಟು ಶೀಘ್ರವಾಗಿ ಈ ಹುದ್ದೆಗಳನ್ನು ನೇಮಕಮಾಡಿಕೊಳ್ಳಲು ಸೂಚಿಸಿ ದಿನಾಂಕ 14.11.1995 ರಲ್ಲಿಯೇ ಮಹಾನಗರ ಪಾಲಿಕೆಗೆ ಪತ್ರ ಬರೆಯಲಾಗಿದ್ದು, ಈ ಬಗ್ಗೆ ಪಾಲಿಕೆಯು ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ಮಾನ್ಯ ಅಧ್ಯಕ್ಷರೆ, ಇದು ನಮಗೆ ಬಂದಂಥ ವರದಿಯಾಗಿದೆ. ಇದನ್ನು ಏನಾದರೂ ಮಾನ್ಯ ಸದಸ್ಯರಿಗೆ ಅಗತ್ಯ ಕಂಡುಬಂದಲ್ಲಿ ಹೆಚ್ಚು ಔಷದಿಗಳನ್ನು ಪೂರೈಸುವುದಕ್ಕೆ ಕಾರ್ಯಗಳನ್ನು ಸರ್ಕಾರ ಮಾಡುತ್ತದೆ ಎಂದು ತಮ್ಮ ಮೂಲಕ ಹೇಳಬಯಸುತ್ತೇನೆ.

(ಋ) ವಿಷಯ: ದಿನಾಂಕ 20-7-2002ರ ಪತ್ರಿಕೆಯಲ್ಲಿ ಬಂದಿರುವ 'ಸತ್ತ ಸ್ನೇಹಿತನ ಹೆಸರಿನಲ್ಲಿ ಶಿಕ್ಷಕನ ಹುದ್ದೆಯನ್ನು ಗಿಟ್ಟಿಸಿಕೊಂಡ ಭೂಪ' ಎನ್ನುವ ಶೀರ್ಷಿಕೆಯ ಕುರಿತು

ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) :- ಮಾನ್ಯ ಅಧ್ಯಕ್ಷರೆ, ದಿನಾಂಕ 20-07-2002ರ ಪತ್ರಿಕೆಯಲ್ಲಿ 'ಸತ್ತ ಸ್ನೇಹಿತನ ಹೆಸರಿನಲ್ಲಿ ಶಿಕ್ಷಕ ಹುದ್ದೆಯನ್ನು ಗಿಟ್ಟಿಸಿಕೊಂಡ ಭೂಪ' ಎನ್ನುವ ಶೀರ್ಷಿಕೆ ಅಡಿಯಲ್ಲಿ ಕೋಲಾರದಲ್ಲಿ ನಡೆದಿರುವಂಥ ಘಟನೆ ಬಗ್ಗೆ ವರದಿ ಬಂದಿದೆ. ಇದರಲ್ಲಿ ಇರುವಂಥ ನಿಜಾಂಶ ಏನೆಂದರೆ, ಮಂಜುನಾಥ ಎನ್ನುವ ಅಭ್ಯರ್ಥಿ (ವಿದ್ಯಾರ್ಥಿ) ಟಿ.ಸಿ.ಹೆಚ್.ನಲ್ಲಿ ಅತೀ ಹೆಚ್ಚು ಎಂದರೆ 90 ಪರ್ಸೆಂಟ್ ಅಂಕ ಗಳಿಸಿದ್ದನು. 1999ರಲ್ಲಿ ಶಿಕ್ಷಕರ ಹುದ್ದೆಗೆ ಅರ್ಜಿ